**ಲಾಜಿಸ್ಟಿಕ್ ಉದ್ಯಮದ ಕೌಶಲ್ಯದ ಕೊರತೆ ನಿವಾರಣೆಗೆ ಉತ್ಕೃಷ್ಟ ಕೇಂದ್ರದ ಸ್ಥಾಪನೆ: ಲಾಜಿಸ್ಟಿಕ್ ಕೌಶಲ್ಯ ವಲಯ ಮಂಡಳಿ ಮತ್ತು ಕೆಎಸ್‌ಡಿಸಿಯೊಂದಿಗೆ ಫ್ಲಿಪ್‌ಕಾರ್ಟ್ ಪಾಲುದಾರಿಕೆ**

- *1,500 ಚದರ ಅಡಿ ಡಿಜಿಟಲ್ ತರಗತಿಗಳನ್ನು ಒಳಗೊಂಡಿರುವ ಬೆಂಗಳೂರಿನ ಇಕಾಮರ್ಸ್ ಲಾಜಿಸ್ಟಿಕ್ ನ ಪ್ರಪ್ರಥಮ ಕೇಂದ್ರ,*
- *ವಿತರಣಾ ಮತ್ತು ವಸ್ತು ನಿರ್ವಹಣೆ, ಉದ್ಯಮ ಪ್ರಮಾಣೀಕೃತ ಪ್ರತಿಭೆಗಳನ್ನು ಅಭಿವೃದ್ಧಿಪಡಿಸುವುದು ಸೇರಿದಂತೆ ಪೂರೈಕೆ ಸರಪಳಿ ಮತ್ತು ಲಾಜಿಸ್ಟಿಕ್ಸ್ ಉದ್ಯಮದ ಎಲ್ಲಾ ಅಂಶಗಳಲ್ಲಿ ಅಭ್ಯರ್ಥಿಗಳಿಗೆ ತರಬೇತಿ ನೀಡುವುದು.*
- *ಕರ್ನಾಟಕ ಕೌಶಲ್ಯ ಮಿಷನ್‌ಗೆ ಅನುಗುಣವಾಗಿ ಫ್ಲಿಪ್‌ಕಾರ್ಟ್ ಎಲ್‌ಎಸ್‌ಸಿ ಸಹಯೋಗದೊಂದಿಗೆ  ಕಲಿಕೆಯ ಮಾದರಿ ರಚಿಸಿದೆ*
- *ಕೌಶಲ್ಯರಹಿತ ಮತ್ತು ನಿರುದ್ಯೋಗಿ ಉದ್ಯೋಗಿಗಳಿಗೆ ರಾಷ್ಟ್ರೀಯ ಕೌಶಲ್ಯ ಅರ್ಹತಾ ಫ್ರೇಂವರ್ಕ್ (ಎನ್‌ಎಸ್‌ಕ್ಯೂಎಫ್) ಅಡಿಯಲ್ಲಿ ಪ್ರಮಾಣಪತ್ರ ನೀಡಲು ಯೋಜನೆ ಸಹಕಾರಿ*

**ಬೆಂಗಳೂರು-ಜ 7 2021:** : ಭಾರತದ ಸ್ವದೇಶಿ ಇ-ಕಾಮರ್ಸ್ ಮಾರುಕಟ್ಟೆ ಫ್ಲಿಪ್‌ಕಾರ್ಟ್, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ (ಎಂಎಸ್‌ಡಿಇ) ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ (ಎನ್‌ಎಸ್‌ಡಿಸಿ) ಕರ್ನಾಟಕ ಕೌಶಲ್ಯ ಅಭಿವೃದ್ಧಿ ಕೇಂದ್ರ (ಕೆಎಸ್‌ಡಿಸಿ) ಮೂಲಕ ಸ್ಥಾಪಿಸಿರುವ ಲಾಜಿಸ್ಟಿಕ್ಸ್ ಕೌಶಲ್ಯ ವಲಯ ಮಂಡಳಿ (ಎಲ್‌ಎಸ್‌ಸಿ) ನೊಂದಿಗೆ ಹೊಸ ಒಪ್ಪಂದವನ್ನು ಪ್ರಕಟಿಸಿದೆ. ಈ ಒಪ್ಪಂದದ ಭಾಗವಾಗಿ, ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ಇ-ಕಾಮರ್ಸ್ ಉದ್ಯಮಕ್ಕಾಗಿ ನುರಿತ ಮತ್ತು ತರಬೇತಿ ಪಡೆದ ಕಾರ್ಯಪಡೆಯೊಂದನ್ನು ನಿರ್ಮಿಸಲು ಫ್ಲಿಪ್‌ಕಾರ್ಟ್ ಉದ್ಯಮ-ಪ್ರಥಮ ಉತ್ಕೃಷ್ಟತೆಯ ಕೇಂದ್ರ(ಸಿಒಇ) ಆರಂಭಿಸಿದೆ.

ಲಾಜಿಸ್ಟಿಕ್ ಉದ್ಯಮಕ್ಕಾಗಿ ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸಲು ಪರಿಚಯಿಸಲಾಗಿರು ಫ್ಲಿಪ್‌ಕಾರ್ಟ್‌ನ CoE ಲಾಜಿಸ್ಟಿಕ್ಸ್ ಉದ್ಯಮದಲ್ಲಿ ಕೆಲಸ ಮಾಡಲು ಬಯಸುವ ಆಕಾಂಕ್ಷಿಗಳಿಗೆ ಮುಕ್ತವಾಗಿರುತ್ತದೆ. ಕ್ಷೇತ್ರಕ್ಕೆ ಕೌಶಲ್ಯ ಅಭಿವೃದ್ಧಿಯ ಮಹತ್ವದ ಬಗ್ಗೆ ಗಮನ ಸೆಳೆಯಲು ಮತ್ತು ಅದರ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುವ ಉದ್ದೇಶವನ್ನು ಕೇಂದ್ರ ಹೊಂದಿದೆ.

1,500 ಚದರ ಅಡಿ ವಿಸ್ತೀರ್ಣದಲ್ಲಿ ಹರಡಿರುವ ಪ್ರಪ್ರಥಮ ಸಿಒಇ, ಬೆಂಗಳೂರಿನಲ್ಲಿ ಇ-ಕಾಮರ್ಸ್ ಪೂರೈಕೆ ಸರಪಳಿ, ಅಭ್ಯರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕಂಪ್ಯೂಟರ್ ಮತ್ತು ಪ್ರೊಜೆಕ್ಟರ್ ಆಧಾರಿತ ಕಲಿಕೆಯೊಂದಿಗೆ ಸಮಕಾಲೀನ ಕಲಿಕೆಯ ತರಗತಿಗಳನ್ನು ಆಯೋಜಿಸುತ್ತದೆ. ಇದಕ್ಕಾಗಿ ಫ್ಲಿಪ್‌ಕಾರ್ಟ್ ಈ ವ್ಯಾಪಕವಾದ ತರಬೇತಿ ಮಾದರಿಯನ್ನು ಅಭಿವೃದ್ಧಿಪಡಿಸಲು, ,

ಸಂಗ್ರಹಣೆ ಮತ್ತು ವಿತರಣೆ, ಗ್ರಾಹಕ ನಿರ್ವಹಣೆ ಮತ್ತು ವಸ್ತು ನಿರ್ವಹಣೆಯ ವಿವಿಧ ಸೂಕ್ಷ್ಮ ವ್ಯತ್ಯಾಸಗಳ ಬಗ್ಗೆ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಎಲ್‌ಎಸ್‌ಸಿ ಮತ್ತು ಕೆಎಸ್‌ಡಿಸಿ ಜೊತೆ ಕೈಜೋಡಿಸಿದೆ. ಇದು ಸ್ಥಳೀಯ ಸಾರಿಗೆ ಕಾನೂನುಗಳು ಮತ್ತು ನಿಬಂಧನೆಗಳು ಮತ್ತು ಸರಬರಾಜು ಸರಪಳಿಯ ಸಮಗ್ರ ಮಾಹಿತಿ ನೀಡುವುದನ್ನು ಒಳಗೊಂಡಿದೆ. ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ರಾಜ್ಯ ಸರ್ಕಾರದ ಭಾಗವಾಗಿರುವ ಕರ್ನಾಟಕ ಕೌಶಲ್ಯ ಮಿಷನ್ ಮತ್ತು ಉತ್ಕೃಷ್ಟ ಕೇಂದ್ರದ ಆಕಾಂಕ್ಷಿಗಳನ್ನು ಸಜ್ಜುಗೊಳಿಸಲು ಎಲ್‌ಎಸ್‌ಸಿ ಸಹಾಯ ಮಾಡುತ್ತಿದೆ.

ತರಬೇತಿಯು ಗ್ರಾಹಕರೊಂದಿಗೆ ಸಂವಹನ ನಡೆಸಲು ಅಗತ್ಯವಾದ "ಮೃದು ಕೌಶಲ್ಯ" ಗಳನ್ನು ಸಹ ಒಳಗೊಂಡಿದೆ. ಜೊತೆಗೆ, ಆಯ್ದ ಅಭ್ಯರ್ಥಿಗಳು ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ಪ್ರಚಾರ ಯೋಜನೆಯಡಿ ಫ್ಲಿಪ್‌ಕಾರ್ಟ್‌ನೊಂದಿಗೆ ಅಪ್ರೆಂಟಿಸ್‌ಶಿಪ್ ಕಾರ್ಯಕ್ರಮಕ್ಕೆ ಸೇರಲು ಅವಕಾಶವನ್ನು ಕೂಡ ಪಡೆಯುತ್ತಾರೆ. ಈ 60 ದಿನಗಳ ತರಬೇತಿ ಅವರಿಗೆ ಇ-ಕಾಮರ್ಸ್ ಕ್ಷೇತ್ರದಲ್ಲಿನ ಉದ್ಯೋಗಾವಕಾಶವನ್ನು ಹೆಚ್ಚಿಸುತ್ತದೆ

ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ಅಭ್ಯರ್ಥಿಗಳು ರಾಷ್ಟ್ರೀಯ ಕೌಶಲ್ಯ ಅರ್ಹತಾ ಫ್ರೇಂವರ್ಕ್ (ಎನ್‌ಎಸ್‌ಎಫ್‌ಕ್ಯೂ) ಅಡಿಯಲ್ಲಿ ಪ್ರಮಾಣ ಪತ್ರ  ಪಡೆಯುತ್ತಾರೆ. ಇದು ಪದವಿಪೂರ್ವ ವಿದ್ಯಾಭ್ಯಾಸಕ್ಕೆ ಸಮಾನವಾಗಿರುತ್ತದೆ. ಈ ಪ್ರಮಾಣಪತ್ರವನ್ನು ಆಸ್ಟ್ರೇಲಿಯಾ, ಡೆನ್ಮಾರ್ಕ್, ಜರ್ಮನಿ ಮತ್ತು ಸೌದಿ ಅರೇಬಿಯಾ ಸೇರಿದಂತೆ ಏಳು ದೇಶಗಳಲ್ಲಿ ಮಾನ್ಯ ಮಾಡಲಾಗಿದೆ. ಈ ಉಪಕ್ರಮದ ಮೂಲಕ, ಫ್ಲಿಪ್‌ಕಾರ್ಟ್, ಕೌಶಲ್ಯರಹಿತ ಮತ್ತು ನಿರುದ್ಯೋಗಿಗಳ ಉದ್ಯೋಗವನ್ನು ಹೆಚ್ಚಿಸಲು ಮತ್ತು ಅವರನ್ನು ಭಾರತದ ನುರಿತ ಮತ್ತು ಪ್ರಮಾಣೀಕೃತ ಕಾರ್ಯಪಡೆಯ ಭಾಗವಾಗಿಸುವ ಗುರಿ ಹೊಂದಿದೆ.

*ಹೊಸ ಒಪ್ಪಂದದ ಕುರಿತು ಪ್ರತಿಕ್ರಿಯಿಸಿದ ಇಕಾರ್ಟ್‌ನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಅಮಿತೇಶ್ ಝಾ, "ಲಾಜಿಸ್ಟಿಕ್ಸ್ ಉದ್ಯಮದ ದೀರ್ಘಕಾಲೀನ ಸುಸ್ಥಿರತೆಗೆ ತರಬೇತಿ ಹಾಗೂ ಮಾಹಿತಿ ಹೊಂದಿರುವ ಉದ್ಯೋಗಿಗಳ ಮಹತ್ವವನ್ನು ಇಕಾರ್ಟ್ ಅರ್ಥ ಮಾಡಿಕೊಂಡಿದೆ. ಇದು ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಜೊತೆಗೆ ವೃತ್ತಿಜೀವನದ ಪ್ರಗತಿಯನ್ನು ಖಚಿತಪಡಿಸುತ್ತದೆ. ಭಾರತದಲ್ಲಿ ಇ-ಕಾಮರ್ಸ್‌ನ ನಿರಂತರ ಬೆಳವಣಿಗೆ ಹೊಂದಿದ. ಇದಕ್ಕಾಗಿ ಲಾಜಿಸ್ಟಿಕ್ಸ್ ಸ್ಕಿಲ್ ಸೆಕ್ಟರ್ ಕೌನ್ಸಿಲ್ ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದೊಂದಿಗೆ ಪಾಲುದಾರಿಕೆ ಹೊಂದಲು ನಾವು ಸಂತೋಷಪಡುತ್ತೇವೆ" ಎಂದಿದ್ದಾರೆ.*

*ಲಾಜಿಸ್ಟಿಕ್ಸ್ ಕೌಶಲ್ಯ ವಲಯ ಮಂಡಳಿಯ ಕ್ಯಾಪ್ಟನ್ ಟಿ.ಎಸ್. ಅಧ್ಯಕ್ಷ ರಾಮಾನುಜಂ, "ಇಂದು ದೇಶ ಎದುರಿಸುತ್ತಿರುವ ದೊಡ್ಡ ಸಮಸ್ಯೆಯೆಂದರೆ ನಿರುದ್ಯೋಗ. ಆದ್ದರಿಂದ ತಮ್ಮ ಉದ್ಯೋಗವನ್ನು ಭದ್ರಪಡಿಸಿಕೊಳ್ಳಲು ಜನರಿಗೆ ಕೌಶಲ್ಯದ ಪ್ರಮಾಣಪತ್ರಗಳ*

*ಅಗತ್ಯವಿದೆ. ಲಾಜಿಸ್ಟಿಕ್ಸ್ ಉದ್ಯಮವು ದೇಶದ ಅತಿದೊಡ್ಡ ಉದ್ಯೋಗದಾತರಲ್ಲಿ ಒಂದಾಗಿದೆ. ಇದರ ಸರಬರಾಜು ವಿಭಾಗದಲ್ಲಿ 40 ದಶಲಕ್ಷಕ್ಕೂ ಹೆಚ್ಚು ಜನರು ಕೆಲಸ ನಿರ್ವಹಿಸುತ್ತಿದ್ದಾರೆ" ಎಂದಿದ್ದಾರೆ.*

ಫ್ಲಿಪ್‌ಕಾರ್ಟ್ ತನ್ನ ಸಾವಿರಾರು ಪೂರೈಕೆ ವಿಭಾಗದ ಉದ್ಯೋಗಿಗಳಿಗೆ ತರಬೇತಿ ನೀಡಲು 2019 ರಲ್ಲಿ ಎಲ್‌ಎಸ್‌ಸಿಯೊಂದಿಗೆ ಪಾಲುದಾರಿಕೆ ಮಾಡಿದೆ. ಸೆಂಟರ್ ಆಫ್ ಎಕ್ಸಲೆನ್ಸ್‌ನೊಂದಿಗೆ, ಕಂಪನಿಯು ತನ್ನ ಪಾಲುದಾರಿಕೆಯನ್ನು ಹೆಚ್ಚಿಸುತ್ತಿದೆ ಮತ್ತು ನುರಿತ ಮತ್ತು ಕೌಶಲ್ಯರಹಿತ ಉದ್ಯೋಗಿಗಳ ತರಬೇತಿ ಮತ್ತು ಅಭಿವೃದ್ಧಿ ಅಗತ್ಯತೆಗಳಿಗೆ ಕೊಡುಗೆ ನೀಡುವ ಮತ್ತು ಅವುಗಳನ್ನು ಉದ್ಯಮವನ್ನು ಸಿದ್ಧಪಡಿಸುವ ಫ್ಲಿಪ್‌ಕಾರ್ಟ್‌ನ ಬದ್ಧತೆಗೆ ಸಾಕ್ಷಿಯಾಗಿದೆ.

**About Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and now Flipkart Wholesale, the Flipkart Group will continue to steer the transformation of commerce in India through technology.

For more information contact: **media@flipkart.com**